# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಬಿದಾಯಿ ಯೋಜನೆಯಡಿ ಬಾಕಿ ಇರುವ ಅರ್ಜಿಗಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:** 1. ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ರವರ ಪ್ರಸ್ತಾವನೆ ಸಂಖ್ಯೆ: ಅಸಂನಿ/ಪುನರ್ ವಿನಿಯೋಗ/ಸಿಆರ್-111/2019-20, ದಿನಾಂಕ: 07-03-2020.

2. ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 439 ಬಿಆರ್ ಎಸ್ 2019, ದಿನಾಂಕ: 19-03-2020.

>>>()<<<

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ(1)ರಲ್ಲಿ ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ ಬೆಂಗಳೂರು, ಇವರು 2019-20ನೇ ಸಾಲಿನಲ್ಲಿ ಬಿದಾಯಿ ಯೋಜನೆಯ ಲೆಕ್ಕಶೀರ್ಷಿಕೆ:-2225-03-800-0-07(059)ರಡಿ ರೂ.4500.00ಲಕ್ಷಗಳ ಆಯವ್ಯಯ ಒದಗಿಸಲಾಗಿದ್ದು, ಸಂಪೂರ್ಣ ವೆಚ್ಚ ಮಾಡಲಾಗಿದೆ. ಬಿದಾಯಿ ಯೋಜನೆಯಡಿ 33,916 ಅರ್ಜಿಗಳು ಬಾಕಿಯಿದ್ದು, ಸದರಿ ಯೋಜನೆಯಡಿ ಅಂದಾಜಿಸಲಾದ ಅರ್ಜಿಗಳಿಗಿಂತ ಹೆಚ್ಚಿನ ಅರ್ಜಿಗಳು ಸ್ವೀಕೃತವಾಗಿದ್ದು, ಅನುದಾನ ಕೊರತೆಯಿಂದ ಬಾಕಿ ಉಳಿದಿರುತ್ತದೆ. ಸದರಿಯೋಜನೆಗೆ ಜಿಲ್ಲೆಗಳಿಂದ ಹೆಚ್ಚಿನ ಬೇಡಿಕೆಯಿದ್ದು, ಮಾನ್ಯ ಸಚಿವರುಗಳು/ ಶಾಸಕರುಗಳು/ ಫಲಾನುಭವಿಗಳು ಬಾಕಿ ಇರುವ ಅರ್ಜಿಗಳಿಗೆ ಅನುದಾನ ಬಿಡುಗಡೆ ಮಾಡಲು ಕಛೇರಿಗಳಿಗೆ ಬಂದು ಒತ್ತಾಯ ಮಾಡುತ್ತಿದ್ದಾರೆ ಹಾಗೂ ಸರ್ಕಾರದ ಅನುದಾನ ದೊರಬಹುದೆಂದು ಉದ್ದೇಶಿಸಿ, ಫಲಾನುಭವಿಗಳು ವಿವಿಧ ಮೂಲಗಳಿಂದ ಸಾಲವನ್ನು ಪಡೆದು ಮದುವೆ ಕಾರ್ಯವನ್ನು ಪೂರ್ಣಗೊಳಿಸಿರುತ್ತಾರೆ. ಆದರೆ, 2020-21ನೇ ಸಾಲಿನ ಆಯವ್ಯಯದಲ್ಲಿ ಸದರಿ ಕಾರ್ಯಕ್ರಮವನ್ನು ಕೈಬಿಡಲಾಗಿರುವುದು ಆಯವ್ಯಯ ಪುಸ್ತಕದಿಂದ ಕಂಡುಬರುತ್ತದೆ.

ಆದುದರಿಂದ, ಬಿದಾಯಿ ಯೋಜನೆಯಡಿ ಬಾಕಿ ಇರುವ ಅರ್ಹ ಅರ್ಜಿಗಳಿಗೆ ರೂ.50,000ಗಳ ಬದಲಾಗಿ ತಲಾ ರೂ.25,000/-ಗಳಂತೆ ಒಂದು ಬಾರಿಗೆ ಬಾಕಿ ಇರುವ ಎಲ್ಲಾ ಅರ್ಜಿಗಳಿಗೆ ಅನುದಾನವನ್ನು ಬಿಡುಗಡೆ ಮಾಡಿ ಬಾಕಿ ಇರುವ ಅರ್ಜಿಗಳ ವಿಲೇಮಾಡಬಹುದಾಗಿದ್ದು, One Time Settlement ಮಾದರಿಯಂತೆ ರೂ.90.00 ಕೋಟಿಗಳ ಅನುದಾನ ಅಗತ್ಯವಿರುವುದರಿಂದ ಅಲ್ಪಸಂಖ್ಯಾತರ ವಿದ್ಯಾರ್ಥಿವೇತನ ಮತ್ತು ಶುಲ್ಕ ಮರುಪಾವತಿ ಯೋಜನೆ ಲೆಕ್ಕಶೀರ್ಷಿಕೆ:2225-03-277-2-68(117)ರಲ್ಲಿ ಉಳಿತಾಯವಾಗುವ ರೂ.9000.00ಲಕ್ಷಗಳನ್ನು ಬಿದಾಯಿ ಯೋಜನೆಯ ಲೆಕ್ಕಶೀರ್ಷಿಕೆ:2225-03-800-0-07(059)ಕ್ಕೆ ಪುನರ್ ವಿನಿಯೋಗಿಸಿಕೊಳ್ಳಲು ಆರ್ಥಿಕ ಇಲಾಖೆಯನ್ನು ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ಸರ್ಕಾರದ ಆದೇಶದಲ್ಲಿ ವಿದ್ಯಾರ್ಥಿವೇತನ ಮತ್ತು ಶುಲ್ಕ ಮರುಪಾವತಿ ಯೋಜನೆ ಲೆಕ್ಕಶೀರ್ಷಿಕೆ:2225-03-277-2-68(117)ರಲ್ಲಿ ಉಳಿತಾಯವಾಗುವ ಅನುದಾನದಲ್ಲಿ ರೂ.8479.00ಲಕ್ಷಗಳನ್ನು ಬಿದಾಯಿ ಯೋಜನೆಯ ಲೆಕ್ಕಶೀರ್ಷಿಕೆ:2225-03-800-0-07 (059)ಕ್ಕೆ ಪುನರ್ ವಿನಿಯೋಗಿಸಿಕೊಳ್ಳಲು ಮಂಜೂರಾತಿ ನೀಡಿ ಆದೇಶಿಸಿದೆ.

AD, Advt
Process
Today for
Payments
20/3

...............2